ಹೇಗೆ ತೊದಲಿದನೆಂದು ವರ್ಣಿಸುವ ಕೀರ್ತನೆಯನ್ನು ಈಗ ನೋಡೋಣ:

**ನಂಗನ್ನೆತ್ತಿಕೊ ಅಮ್ಮ! ಎತೋದೆ ಅಮ್ಮಾ!**
**ಬಲು ಒತ್ತು ಅತ್ತು ಬಂದೆನೆ! ಇತ್ತಿ ಅಮ್ಮಿ ತಿಂದೆನೆ॥**

ತೊದಲು ನುಡಿಗಳ ಅರ್ಥ ಹೀಗಿದೆ: **ನಂಗನ್ನೆತ್ತಿಕೋ ಅಮ್ಮ** – ರಂಗನನ್ನು ಎತ್ತಿಕೋ ಅಮ್ಮ, **ಎತೋದೆ ಅಮ್ಮಾ** – ಯಶೋದೆಯಮ್ಮಾ, **ಬಲು ಒತ್ತು ಅತ್ತು ಬಂದೆನೇ** – ಬಹಳ ಹೊತ್ತು ಹಸಿದು ಬಂದಿದ್ದೇನೆ. **ತುತಿಬಾಯಿ ವಂಗ್ಯಾವೆ** – ತುಟಿ ಬಾಯಿ ಒಣಗಿವೆ. **ಬಿಸಿ ಆವು ವಾತತ್ತಿ ಬತ್ತಾವೆ** – ಬಿಸಿ ಹಾಲು ನನಗೆ ಓಕರಿಕೆ ಬರುತ್ತದೆ. **ಅತಿ ಆವು ಉಪ್ಪುಕಾಯಿ** – ಹಸಿಹಾಲು ಉಪ್ಪಿನಕಾಯಿ ಜೊತೆಗೆ ಕೊಡು. **ಉತ್ತತ್ತಿ ಬೆನ್ನಿ ತಿಂದೇನೆ** – ಒಣ ಖರ್ಜೂರ ಬೆಣ್ಣೆ ತಿನ್ನುತ್ತೇನೆ.... ಹೀಗೆ ಸಾಗುತ್ತದೆ ಈ ಗೀತೆ. ಮಗುವಿನ ಈ ತೊದಲಿನ ಮಾತಿಗೆ ಮರುಳಾದ ಯಶೋದೆ ಕೃಷ್ಣನನ್ನು ಎತ್ತಿ ಎದೆಗವಚಿಕೊಂಡಳಂತೆ.

ಶ್ರೀಕೃಷ್ಣನಿಗೆ ಯಶೋದೆಯು ಅನ್ನಪ್ರಾಶನ ಮಾಡಿಸಿದಳು.

**ಅನ್ನವನುಣಿಸಿದರು । ಅನ್ನವನುಣಿಸಿದರು ।**
**ಘನ್ನಮಹಿಮಶಿಶು ರನ್ನ ರಮಾಪತಿಗೆ ॥** .......

ಅಪ್ರಾಕೃತಕಾಯನಾದ ಆನಂದದ ದೇಹದ ಆದಿಪುರುಷನಿಗೆ ಅನ್ನಪ್ರಾಶನ ಮಾಡಿಸಿ, ಮಂಗಳಾರತಿ ಬೆಳಗಿದ ಯಶೋದೆ ಅವನನ್ನು ರನ್ನದ ತೊಟ್ಟಿಲಲ್ಲಿ ಮಲಗಿಸಿ ಜೋಗುಳ ಹಾಡಿದಳಂತೆ. ಶ್ರೀ ಪುರಂದರ ದಾಸರ ಬಹುಜನಪ್ರಿಯವಾದ ಈ ಜೋಗುಳದ ಹಾಡು ತುಂಬ ಸೊಗಸಾಗಿದೆ.

**ಜೋ ಜೋ ಶ್ರೀಕೃಷ್ಣ ಪರಮಾನಂದ ।**
**ನಂದ ಗೋಪಿಯ ಕಂದ ಬಾಲ ಮುಕುಂದ ॥** .......

ಯಶೋದೆಯು ತನ್ನ ಜೋಗುಳದ ಮಂಜುಳ ಮಧುರಧ್ವನಿಯನ್ನು ಕೇಳುತ್ತಾ ಕಣ್ಣರಳಿಸಿ ತನ್ನನ್ನೇ ನೋಡುವ ಮುದ್ದು ಮೋಹನ ಕೃಷ್ಣನಿಗೆ ಶ್ರೀರಾಮನ ಕಥೆಯನ್ನು ಹೇಳುವಾಗ, ಕೃಷ್ಣನು ಹೂಂಗುಡುತ್ತಿದ್ದನಂತೆ.

**ಕತೆಯ ಕೇಳೆಲೆ ಕಂದ ಹುಂ, ರಘುಜನೆಂಬ ಹುಂ, ಸಕಾಂತಂ ವನಸ್ಥಿತ ನಾದಂ, ಗುರು ಪೇಳೆ ಹುಂ, ದಶಶಿರಂ ಕೊಂಡುಯ್ದನಾ ರಾಮನಾ...**

ಯಶೋದೆ ಕಥೆ ಹೇಳುತ್ತಿದ್ದಾಳೆ. ಕೃಷ್ಣನು 'ಹೂಂ' ಗುಡುತ್ತಿದ್ದಾನೆ. ಶ್ರೀಕೃಷ್ಣ! ಕಂದಾ! ನಿನಗೆ ಕಥೆ ಹೇಳುತ್ತೇನೆ ಕೇಳು!, **ಹುಂ;** ಪೂರ್ವಕಾಲದಲ್ಲಿ ಶ್ರೀರಾಮನೆಂಬವನು, **ಹುಂ;** ಪಿತೃವಾಕ್ಯ ಪರಿಪಾಲನೆಗೆ, **ಹುಂ:** ಪತ್ನಿ ಸೀತಾಸಹಿತ ಪಂಚವಟಿಯ ಅರಣ್ಯಕ್ಕೆ ಹೋದನು, **ಹುಂ;** ಅಲ್ಲಿ ಹತ್ತು ತಲೆಯ ರಾವಣನೆಂಬ ರಾಕ್ಷಸನು. **ಹುಂ.** ನಂತರ ಯಶೋದೆಯು ರಾವಣನು ಸೀತಾದೇವಿಯನ್ನು ಅಪಹರಿಸಿದ ಎಂದಾಗ, ಶ್ರೀಕೃಷ್ಣ ಪರಮಾತ್ಮನು ತನ್ನ ಪೂರ್ವಾವತಾರವನ್ನು ನೆನೆದು ಔಡುಗಚ್ಚಿ, ಹುಬ್ಬು ಗಂಟಿಕ್ಕಿ ಕೆಂಡಗಣ್ಣವನಾಗಿ ಕೋಪದಿಂದ ಹೂಂಕರಿಸಲು, ಯಶೋದೆ ಅದನ್ನು ಕಂಡು ಭಯಗೊಂಡಳಂತೆ.

ಶ್ರೀ ವಾದಿರಾಜ ಸ್ವಾಮಿಗಳು ತಮ್ಮ ಒಂದು ರಚನೆಯಲ್ಲಿ ಕೃಷ್ಣ ನಿದ್ದೆ ಮಾಡಿದ ಪ್ರಸಂಗವನ್ನು ಹೀಗೆ ಸೊಗಸಾಗಿ ನಿರೂಪಿಸಿದ್ದಾರೆ:

ಒಮ್ಮೆ ಯಶೋದೆಯು "ಕೃಷ್ಣ, ಸುಮ್ಮನೆ ನಿದ್ದೆ ಮಾಡು ಮಗನೆ" ಎನ್ನುತ್ತಾಳೆ. ಆಗ ಕೃಷ್ಣನು "ಯಾಕಮ್ಮಾ ನಿದ್ದೆ ಮಾಡಬೇಕು?" ಎಂದು ಕೇಳಿದಾಗ ಯಶೋದೆಯು "ನೀನು ತಿಂದದ್ದು ಅರಗಬೇಡವೇ?" ಎನ್ನುತ್ತಾಳೆ. ಲಯಕಾಲದಲ್ಲಿ ಬ್ರಹ್ಮಾಂಡವನ್ನೇ ನುಂಗಿ ಅರಗಿಸಿಕೊಂಡವನಿವನು ಎಂದು ಅವಳಿಗೇನು ಗೊತ್ತು? ಶ್ರೀಕೃಷ್ಣ ಮತ್ತೆ ಕೇಳಿದ, "ನಿದ್ರೆ ಎಂದರೇನಮ್ಮಾ?" ಯಶೋದೆ, "ನಿದ್ರೆ ಎಂದರೆ ಕಣ್ಮುಚ್ಚಿ ಪರಮಾತ್ಮನನ್ನು ಆಲಂಗಿಸಿಕೊಳ್ಳುವುದು" ಎನ್ನುತ್ತಾಳೆ. ಶ್ರೀಕೃಷ್ಣನು ತನ್ನನ್ನೇ ತಾನು ಆಲಂಗಿಸಿಕೊಂಡನಂತೆ. ಶ್ರೀಕೃಷ್ಣನು ತನ್ನನ್ನೇ ತಾನು ಆಲಂಗಿಸಿ ಕೊಂಚ ಕಾಲ ಕಣ್ಮುಚ್ಚಿ, ಬಳಿಕ ಕಣ್ಣು ತೆರೆದು, "ಅಮ್ಮ ನಿದ್ರೆ ಆಯಿತು. ತಿಂದ ಹಾಲು ಬೆಣ್ಣೆ ಕರಗಿತು. ನನಗೆ ಹಸಿವಾಗಿದೆ. ಇನ್ನೂ ಸ್ವಲ್ಪ ಬೆಣ್ಣೆ ಕೊಡು" ಎನ್ನುತ್ತಾನೆ.

ಯಶೋದೆಯು, "ಕಂದಾ! ರಂಗ, ರಂಗಯ್ಯಾ, ದೇವರು ನಿನ್ನ ಹಾಗಲ್ಲಾ. ಅವನು ಕ್ಷೀರಸಾಗರವನ್ನೇ ತೊಟ್ಟಿಲಾಗಿಸಿಕೊಂಡು ಶ್ರೀಶೇಷದೇವರನ್ನು ಹಾಸಿಗೆಯಾಗಿಸಿಕೊಂಡು ಮಲಗಿ ಚೆನ್ನಾಗಿ ನಿದ್ರೆ ಮಾಡುತ್ತಾನೆ. ಅವನು ನಿನಗೂ ಒಂದಿಷ್ಟು ನಿದ್ರೆ ಕೊಡಲಿ ಎಂದು ಅವನನ್ನು ಬೇಡುತ್ತೇನೆ" ಎನ್ನುತ್ತಾಳೆ. ಆಗ ಶ್ರೀಕೃಷ್ಣನು, "ಅಮ್ಮಾ! ದೇವರು ಚೆನ್ನಾಗಿ ನಿದ್ರೆ ಮಾಡುತ್ತಾನಾದರೆ, ನಿನ್ನ ಪ್ರಾರ್ಥನೆಯನ್ನು ಅವನು ಹೇಗೆ ಕೇಳಿಸಿಕೊಳ್ಳುತ್ತಾನೆ?" ಎಂದಾಗ, ಯಶೋದೆ ತನ್ನ ಅಜ್ಞಾನಕ್ಕೆ ತಾನೇ ನಾಚಿದಳಂತೆ. ✪

---

**ಚಿಂತನ ಪ್ರಭ**

**ಆಗಸ್ಟ್ ೧೫**

ನಮಗೆ ಸ್ವಾತಂತ್ರ್ಯ ಬಂದ ಶುಭಸಂದರ್ಭದಲ್ಲಿ ಶ್ರೀ ಡಿ.ವಿ.ಜಿ. ಒಂದು 'ಅಭಿನಂದನಸ್ತವ' ವನ್ನು ಹಾಡಿದರು. ಅದರ ಆರಂಭದ ಪದ್ಯ ಹೀಗಿದೆ: " ಶ್ರೀರಸ್ತು, ಸ್ವಸ್ತಿ, ಮಾತೇ! ಜಗದಖಿಲಹಿತೇ! ದಿವ್ಯತೇಜೋವಿಭೂತೇ! ಪೌರಾಣೀ! ಪುಣ್ಯವಾಣೀ! ಬಹುಕುಲಜನನೀ! ಬ್ರಹ್ಮವಿಜ್ಞಾನದಾನೀ! ಪಾರಕ್ಯಾಕ್ರಾಂತಿ ಈಗಳ್ ಪರಿದುದು. ಗೆಲಿದೌ ಭಾರತೀ! ರಾಜ್ಞಿಯಾಗೀ ಸ್ವೈರ ಅಧೀಶಿತ್ವ ಸಿಂಹಾಸನದಿ ವಿಜಯಿಸೌ ಧರ್ಮದೀಕ್ಷಾಪ್ರಶಸ್ತೇ!" ಪುರಾತನವಾದ ಈ ಪುಣ್ಯಭೂಮಿ ಯಾರು ಇಲ್ಲಿಗೆ ಬಂದರೂ ಅವರನ್ನೆಲ್ಲ ತಾಯಿಯಂತೆ ಸಲಹಿ, ಅವರಿಗೆ ಬ್ರಹ್ಮಜ್ಞಾನವನ್ನು ದಾನಮಾಡಿತು. ಯಾರ ಪಾಪವೋ, ಯಾರ ಶಾಪವೋ, ಅಖಿಲ ಜಗತ್ತಿನ ಹಿತಚಿಂತನೆ ಮಾಡುತ್ತಿದ್ದ ಈ ದೇಶ ಪರಕೀಯರ ಆಕ್ರಮಣಕ್ಕೆ ಸಿಕ್ಕಿತು. ಈಗ ಆ ಆಕ್ರಮಣ ಹೋಯಿತು. "ಸಂಭಾವ್ಯಂ ಜಗಕೆ ಈ ನಿರಸ್ತ್ರರಣಜೈತ್ರಂ ಭಾರತೀಸಾಧಿತಂ." ಭಾರತವು ಸಾಧಿಸಿದ ಈ ಜಯವು ರಕ್ತಪಾತವಿಲ್ಲದೆ ಸಂಪಾದನೆಯಾದದ್ದು. ಇದನ್ನು ನೋಡಿ ಲೋಕ ಪಾಠಕಲಿಯಬೇಕಾಗಿದೆ. ಈಗ "ಜನತಾರಾಜ್ಯಂ ಅಭೂತಪೂರ್ವಸುಕೃತಂ ತಾನ್ ಇಂದು ಸಂದಿರ್ಪುದೌ"; ಪ್ರಜೆಗಳು ತಮ್ಮನ್ನು ತಾವೇ ಆಳಿಕೊಳ್ಳುವ ಪುಣ್ಯವನ್ನು ಈ ದೇಶ ಹಿಂದೆ ಎಂದೂ ತಾನು ಕಂಡಿರಲಿಲ್ಲ. "ಜನನೀ! ನೀನ್ ನಿಲ್ವವೋಲ್ ಕರುಣಿಸಾ ಚೈತನ್ಯನೈರ್ಮಲ್ಯಮಂ"; ಸ್ವಾತಂತ್ರ್ಯ ಬಂದದ್ದು ದೊಡ್ಡದಲ್ಲ, ಅದನ್ನು ಉಳಿಸಿಕೊಳ್ಳುವುದು ದೊಡ್ಡದು. ಅದು ಆಗಬೇಕಾದರೆ, ಅದಕ್ಕೆ ನಿರ್ಮಲವಾದ ಚೈತನ್ಯ ಅತ್ಯವಶ್ಯ. ಅದು ಉಂಟಾಗುವಂತೆ ತಾಯಿ ಹರಸಬೇಕು. ಆಕೆಯ ಹರಕೆಗೆ ನಾವು ಪಾತ್ರರಾಗಬೇಕು. ಧರ್ಮದ ದೀಕ್ಷೆಯನ್ನು ನಾವು ವಹಿಸುವವರೆಗೂ ನಮಗೆ ಪಾತ್ರತ್ವ ಆಗದು. ಪ್ರತಿ ವರ್ಷದ ಆಗಸ್ಟ್ ೧೫ ನಮಗೆ ಆತ್ಮಪರೀಕ್ಷೆಯ ದಿನ, ದೀಕ್ಷಾಗ್ರಹಣದ ದಿನ ಆಗಬೇಕು.

– ಜಿ.ಪಿ. ರಾಜರತ್ನಂ (ವಿಚಾರರಶ್ಮಿ)